## ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

## ಅಸಲು ದಾವಾ ಸಂ.27/2018

ಸಾಕ್ಷಿದಾರರ ಹೇಳಿಕೆಃ

| | | | |
|---|---|---|---|
| **ಹೆಸರು** | : | ನವೀನ್ ಕುಮಾರ್ | ನಿಸಿಃ-**1** |
| **ತಂದೆಯ ಹೆಸರು** | : | ಲೇಟ್ ಲಕ್ಷ್ಮೀಕಾಂತ್ | |
| **ವಯಸ್ಸು** | : | 40 ವರ್ಷ | |
| **ವೃತ್ತಿ** | : | ಉಪನೋಂದಣಾಧಿಕಾರಿಗಳು | |
| **ವಾಸಸ್ಥಳ** | : | ಹೊನ್ನಾಳಿ | |

ದಿನಾಂಕಃ **13-03-2026** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ :-ನ್ಯಾಯಾಲಯದಿಂದಃ-

ನಾನು 2023 ರಿಂದ ಇಲ್ಲಿಯವರೆಗೂ ಹೊನ್ನಾಳಿ ಉಪನೋಂದಣಿ ಕಚೇರಿಯಲ್ಲಿ ಉಪನೋಂದಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ನ್ಯಾಯಾಲಯದ ಸಮನ್ಸ್‌ನ ಮೇರೆಗೆ ನ್ಯಾಯಾಲಯಕ್ಕೆ ಹಾಜರಾಗಿ ಜಿ.ದೇವಿರಮ್ಮನ ಮರಣ ಶಾಸನಕ್ಕೆ ಸಂಬಂಧಪಟ್ಟಂತೆ ನೋಂದಣಿ ಆದ ಬಗ್ಗೆ ಹೆಬ್ಬೆಟ್ಟಿನ ಗುರುತಿನ ವಹಿಯನ್ನು ಹಾಜರುಪಡಿಸಿದ್ದು ಮತ್ತು ಸದರಿ ಮೂಲ ದಾಖಲಾತಿಯ ಜೊತೆಯಲ್ಲಿ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ನಂತರ ಮೂಲ ದಾಖಲಾತಿ ಮತ್ತು ದೃಢೀಕೃತ ನಕಲನ್ನು ಪರಿಶೀಲಿಸಿ ಮತ್ತು ಮೂಲ ದಾಖಲಾತಿಯನ್ನು ವಾಪಾಸ್ಸು ನೀಡಿ ದೃಢೀಕೃತ ನಕಲನ್ನು ನಿಸಿ-1 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ವಾದಿಯ ಪರ ವಕೀಲರಿಂದಃ-

ನಿಸಿ-1 ದಾಖಲೆಯಲ್ಲಿ ದೇವಿರಮ್ಮರವರು ಎಡಗೈ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತಾರೆ ಎಂದರೆ ಸರಿ. ನಿಸಿ-1 ದಾಖಲೆಗೆ ಮರಣ ಶಾಸನವನ್ನು ಯಾರು ಬರೆದುಕೊಡುತ್ತಾರೋ ಅವರ ಸಹಿಯನ್ನು ಪಡೆದುಕೊಳ್ಳುತ್ತೇವೆ ಎಂದರೆ ಸರಿ. ನಿಸಿ-1 ದಾಖಲಾತಿಯ ಪ್ರಕಾರ ಮರಣ ಶಾಸನವನ್ನು ದೇವಿರಮ್ಮರವರು ಬರೆದುಕೊಟ್ಟಿದ್ದಾರೆ ಎಂದರೆ ಸರಿ.

<u>ಪಾಟೀ ಸವಾಲುಃ ಪ್ರತಿವಾದಿಯ ಪರ ವಕೀಲರಿಂದಃ-</u>

ನಿಸಿ-1 ದಾಖಲೆಯಲ್ಲಿ ದಿನಾಂಕ ನಮೂದಾಗಿಲ್ಲ ಎಂದರೆ ಸಾಕ್ಷಿಯು ದಿಃ 30-11-1995 ಎಂದು ನಮೂದಾಗಿದೆ ಎಂದು ನುಡಿಯುತ್ತಾರೆ. ನಿಸಿ-1 ದಾಖಲೆಯಲ್ಲಿ ಮರಣ ಶಾಸನವನ್ನು ದೇವಿರಮ್ಮರವರು ಯಾರಿಗೆ ಬರೆದುಕೊಟ್ಟಿದ್ದಾರೆ ಎಂದು ನಮೂದಾಗಿಲ್ಲ ಎಂದರೆ ಸಾಕ್ಷಿಯು ಸದರಿ ದಾಖಲೆಯಲ್ಲಿ ಮರಣ ಶಾಸನವನ್ನು ಯಾರು ಬರೆದುಕೊಡುತ್ತಾರೋ ಅವರ ಹೆಬ್ಬೆಟ್ಟಿನ ಗುರುತನ್ನು ಮಾತ್ರ ಪಡೆದುಕೊಳ್ಳುತ್ತೇವೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಸಿ-1 ದಾಖಲೆಯಲ್ಲಿ ದೇವಿರಮ್ಮರವರು ಯಾವ ಸ್ವರೂಪದ ದಾಖಲೆಗೆ ಬರೆದುಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ದಸ್ತಾವೇಜು ಪುಸ್ತಕ-III ರಲ್ಲಿ ಮರಣ ಶಾಸನಕ್ಕೆ ಸಂಬಂಧಪಟ್ಟಂತೆ ಮಾತ್ರ ನಮೂದು ಮಾಡುತ್ತೇವೆ ಎಂದು ನುಡಿಯುತ್ತಾರೆ. ನಿಸಿ-1 ದಾಖಲೆಯಲ್ಲಿ ದೇವಿರಮ್ಮರವರು ಎಡಗೈ ಹೆಬ್ಬೆಟ್ಟಿನ ಗುರುತನ್ನು ಗುರುತಿಸಲು ನನಗೆ ಯಾವುದೇ ಅಧಿಕಾರ ಇಲ್ಲ ಮತ್ತು ಮರಣ ಶಾಸನದ ಸಾಕ್ಷಿದಾರರಿಗೆ ಅಧಿಕಾರ ಇದೆ ಎಂದರೆ ಸಾಕ್ಷಿಯು ಮರಣ ಶಾಸನವನ್ನು ಬರೆದುಕೊಡುವವರು ನಮ್ಮ ಸಮಕ್ಷಮ ಕಚೇರಿಯಲ್ಲಿ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತಾರೆ ಆದ ಕಾರಣ ನಾನು ಹೇಳುತ್ತಿದ್ದೇನೆ ಎಂದು ನುಡಿಯುತ್ತಾರೆ. ದೇವಿರಮ್ಮರವರು ಹೆಬ್ಬೆಟ್ಟಿನ ಗುರುತನ್ನು ಮರಣ ಶಾಸನಕ್ಕೆ ಮತ್ತು ನಿಸಿ-1 ದಾಖಲೆಗೆ ಹೊರತುಪಡಿಸಿ ನಮ್ಮ ಕಚೇರಿಯಲ್ಲಿರುವ ಯಾವುದೇ ದಾಖಲಾತಿಗೆ ಹೆಬ್ಬೆಟ್ಟಿನ ಗುರುತನ್ನು ಹಾಕಿರುವುದಿಲ್ಲ. ನಮ್ಮ ಇಲಾಖೆಯಲ್ಲಿ ಯಾರಾದರೂ ಮರಣ ಶಾಸನವನ್ನು ನೋಂದಣಿ ಮಾಡಿಸಿಕೊಂಡು ಹೋದರೆ ಅದಕ್ಕೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ಹಾಜರುಪಡಿಸುವ ಅಧಿಕಾರ ಇದೆಯೇ ಹೊರತು ಅವರ ಹೆಬ್ಬೆಟ್ಟಿನ ಗುರುತನ್ನು ಗುರುತಿಸುವ ಅಧಿಕಾರ ಇಲ್ಲ ಎಂದರೆ ಸಾಕ್ಷಿಯು ಮರಣ ಶಾಸನವನ್ನು ಬರೆದುಕೊಟ್ಟವರು ನಮ್ಮ ಸಮಕ್ಷಮ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತಾರೆ ಆದ ಕಾರಣ ನುಡಿಯುತ್ತಿದ್ದೇನೆ ಎಂದು ನುಡಿಯುತ್ತಾರೆ. ನಿಸಿ-1 ದಾಖಲೆಯ ಬಗ್ಗೆ ನಿಮಗೆ ಯಾವುದೇ ವೈಯಕ್ತಿಕ ಮಾಹಿತಿ ಇಲ್ಲ ನಿಮ್ಮ ಕಚೇರಿಯಲ್ಲಿ ಇದ್ದ ದಸ್ತಾವೇಜನ್ನು ತಂದು ಹಾಜರುಪಡಿಸಿದ್ದೇವೆ ಎಂದರೆ ಸರಿ.

ಮರುವಿಚಾರಣೆ ಇರುವುದಿಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.